Regd No M 1299 34 th Year ತಾ|| 15—6—51

SATYAVADI



ಸಂಪಾದಕರು- ಆರಮನೆ ಸಿರಸ್ತೆದಾರ್ ಎಂ. ವಿ. ಸುಬ್ರಾಯರು [ಬಿಡಿ ಪ್ರತಿ 3 ಸೈ

ಬಟ್ಟೆಯ ಕ್ಯಾಮದಿಂದ ತತ್ತರಿಸುವ ಭಾರತದಿಂದ

— ಬಟ್ಟೆ ಹೊರಗೆ ರಫ್ತಾಗುತ್ತಿದೆ —

ಅರೆ ನಗ್ನಾವಸ್ಥೆಯಲ್ಲಿ ಜನರು ನರಳುವಂತಹ ಬಟ್ಟೆಯ ಕ್ಷಾಮ ಭಾರತದಲ್ಲಿ ಕಂಡು ಬಂದಿದೆ. ತಲಾ ತಿಂಗಳಿಗೆ ೨೦ ಇಂಚುಗಳಷ್ಟು ಬಟ್ಟೆ ಮಾತ್ರ ಇಲ್ಲಿಯ ಜನರಿಗೆ ದೊರಕುತ್ತದೆ. ಇಂತಹ ವಿಷನ್ನಾವಸ್ಥೆಯಿಂದ ಕಂಗೆಡುವ ಭಾರತೀಯರಿಗೆ ಮೇ ೧೪ ರಂದು ಸಿಂಗಾಪುರದಿಂದ ರೈಟರ್ ವಾರ್ತೀದಾರನು ಕಳಿಸಿರುವ ಈ ಕೆಳಗಿನ ಸಂದಿಯ ಸಖೇದಾಶ್ಚರ್ಯವನ್ನು ಉಂಟುಮಾಡದಿರದು ' ಬಿಹಾರ್ ಹೆರಾಲ್ಡ್ ' ಪತ್ರಿಕೆಯಲ್ಲಿ ರೈಟರ್ ವಾರ್ತೀದಾರನು ಮಾಡಿದ ವರದಿ ಈ ರೀತಿ ಪ್ರಕಟವಾಗಿದೆ—

' ಸಿಂಗಾಪುರದ ಗುದಾಮುಗಳೆಲ್ಲ ಭಾರತದಿಂದ ಬಂದ ಬಟ್ಟೆಬರೆಗಳಿಂದ ತುಂಬಿಹೋಗಿವೆ ; ಹಾರ್ಬರ್ ಬೋರ್ಡ್ ಮತ್ತು ಖಾಸಗಿ ಜವಳಿ ಅಂಗಡಿಗಳ ಬಂಡಸಾಲೆಗಳಲ್ಲಿ ಹಿಂದೂದೇಶದ ಬಟ್ಟೆ ಮತ್ತು ಅಂಥೇ ಪದಾರ್ಥಗಳು ತುಂಬಿ ಹೋಗಿವೆ....ಭಾರತದಿಂದ, ಮಿತಿಮೀರಿದ ಬಟ್ಟೆ ಬಂದುದರಿಂದ ಬಟ್ಟೆ ಬರೆಯ ವ್ಯಾಪಾರವು ಸ್ತಬ್ಧವಾಗುವ ಪರಿಸ್ಥಿತಿ ನಿರ್ಮಾಣವಾಗಿದೆಯೆಂದು ಸರ್ಕಾರದ ವಕ್ತಾರನೊಬ್ಬನು ಹೇಳಿರುತ್ತಾನೆ ''

ಸ್ವಂತ ದೇಶದಲ್ಲಿ ಶವಕ್ಕೆ ಸುತ್ತುವಷ್ಟು ಬಟ್ಟೆಗೆ ತತ್ವಾರವಾದ ಕಾಲದಲ್ಲಿ ಸಿಂಗಾಪುರದ ಗುದಾಮು ಗಳಲ್ಲಿ ಗಿರಾಕಿಗಳಿಗೆ ಗತಿಯಿಲ್ಲದೆ ಭಾರತದ ಬಟ್ಟೆಯು ಪಾಸಾತ್ತು ಕೊಳ್ಳೆಯಂತಿದೆ ಎಂಬ ಸುದ್ದಿ ಕೇಳುವಾಗ ಅಳಬೇಕೋ ನಗಬೇಕೊ ತಿಳಿಯದಾಗಿದೆ. (ಪ್ರ ಮುಂ)

ದಿವ್ಯವಾಣಿ ವಾರ್ತೆಗಳು

ಗಾದೆಯ ಮಾತುಗಳು ವೇದಕ್ಕೆ ಸಮಾನವಾದವು ಮತ್ತು ಇವು ರಾಷ್ಟ್ರದ ಹಿತವೆಂಬ ಹಾಲಿನ ಮೇಲೆ ಇರುವ ಕೆನೆಯಂತೆ ಇರುವವು — ಅನನ್

ಭಾರತದ ವಿದ್ಯಾ ಸಚಿವರಾದ ಮೌಲಾನಾ ಅಬುಲ್ ಕಲಂ ಆಜಾದರು ರೋಮ್ ನಲ್ಲಿ ಇಟ್ಯಾಲೊ - ಭಾರತ ಸಾಂಸ್ಕೃತಿಕ ಸಮಾಜವನ್ನು ಸ್ಥಾಪಿಸಿದರು

ಮೈಸೂರು ಸಂಸ್ಥಾನದಲ್ಲಿ ಪಡಿತರವನ್ನು ಹನ್ನೆರಡು ಔನ್ಸಿಗೆ ಹೆಚ್ಚು ಮಾಡಬೇಕಾದರೆ ಕೇಂದ್ರಸರ್ಕಾರ ಮೈಸೂರಿಗೆ ಒಂದು ಲಕ್ಷ ಟನ್ ಅಕ್ಕಿ ಕಳಿಸಬೇಕಾಗುವದು.

ಮೊನ್ನೆ ವಾಷಿಂಗ್ಟನ್ನಿನಲ್ಲಿ ಅಧ್ಯಕ್ಷ ಟ್ರೂಮನರು ಹೇಳಿಕೆಯಿತ್ತು, ಹೋದ ವರ್ಷ ರಸ್ಕ್ ಅವಘಡದಲ್ಲಿಯೇ ಹತ್ತು ಲಕ್ಷ ಮಂದಿ ಸತ್ತರು ಆದರೆ ಕೊರಿಯು ದೆಲ್ಲಿ ಕೇವಲ ಎಂಬತ್ತು ಸಾವಿರ ಅಮೇರಿಕನರು ಕೊರಿಯು ಭೂಮಿಯಲ್ಲಿ ಸತ್ತಿರುವದಾಗಿ ತಿಳಿಸಿರುವರು.

ಕರ್ತವ್ಯವನ್ನು ಪಾಲಿಸಿ; ಇಲ್ಲವೇ ಆಡಳಿತದಿಂದ ಹೊಂಬನ್ನಿ — ಹೀಗೆಂದು ಆಚಾರ್ಯ ಕೃಪಾಲಿನಿ ಕಾಂಗ್ರೆಸ್ ಧುರೀಣರಿಗೆ ಕರೆಕೊಟ್ಟಿದ್ದಾರೆ

ನಮ್ಮಲ್ಲಿರುವ ಸೇನೆ ನಮ್ಮ ರಕ್ಷಣೆಗೆ ಅವಶ್ಯಕವಿದೆ ಆದ್ದರಿಂದ ನಿಮಗೆ ಒದಗಿಸಲು ಆಗುವದಿಲ್ಲ ಎಂದು ಭಾರತ ವಿಶ್ವಸಂಸ್ಥೆಗೆ ತಿಳಿಸುವ ವರದಿ ಇದೆ

ಬಟ್ಟೆ ಮೇಲಿನ ಮಾರಾಟ ತೆರಿಗೆ ರದ್ದಾಗುವುದು ?

ಅಗತ್ಯ ವಸ್ತುಗಳ ಪಟ್ಟಿಯಲ್ಲಿ ಬಟ್ಟೆಯನ್ನು ಸೇರಿಸಲಾಗುವದು ಮತ್ತು ಮಾರಾಟಕರ ವಿಧಿಯಿಂದ ಸಂಪೂರ್ಣವಾಗಿ ರದ್ದು ಮಾಡಲ್ಪಡುವದೆಂದು ಕಲ್ಕತ್ತ ವಾರ್ತೆ. ಭಾರತ ಸರ್ಕಾರ ಈ ಬಗ್ಗೆ ಪೂರ್ಣ ಪರಿಶೀಲಿಸಿದೆಯೆಂದೂ ಮತ್ತು ಪ್ರಾಂತ ಸರ್ಕಾರಗಳ ಅಭಿಪ್ರಾಯಗಳನ್ನು ಕೇಳಲಾಗಿದೆಯೆಂದೂ ಗೊತ್ತಾಗಿದೆ

× ಪ್ರಯಾಣಿಕರು ಹತ್ತು ಪೌಂಡು ಬಟ್ಟೆಯನ್ನು ಮಾತ್ರ ಅಥವಾ ನೂರು ರೂಪಾಯಿ ಮಾತ್ರ ತೆಗೆದುಕೊಂಡು ಹೋಗಬಹುದೆಂದು ಬೊಂಬಾಯಿ ವಾರ್ತೆ.

× ಐರ್ಲೆಂಡಿನ ಪ್ರಧಾನಿಯಾಗಿ ಕ್ರಾಂತಿಪುರುಷ ಡಿವೇಲರ ಆಯ್ಕೆಯಾಗಿ ಸಚಿವ ಪಟ್ಟಿ ತಯಾರಿಸಿರುವದಾಗಿ ಡಬ್ಲಿನ್ ವಾರ್ತೆ.

ಕೃತಜ್ಞತೆ ಅರ್ಪಣೆ

ಎಂಜಿ ರಾಷ್ಟ್ರ ಸ್ವೀಕರಣ ನೀತಿಗೆ ಭಾರತ ಬೆಂಬಲಿಸಿದ ಬಗ್ಗೆ ಪರ್ಷಿಯಾ ಪ್ರಧಾನಿ ಡಾ|| ಮೊಸಾದಿಕ್ ಕೃತಜ್ಞತೆ ವ್ಯಕ್ತಪಡಿಸಿರುವದಾಗಿ ಟೆಹರಾನ್ ವಾರ್ತೆ.

ಮೈಸೂರಲ್ಲಿ ೧೨ ಔನ್ಸ್

ಸಚಿವ ಶ್ರೀ ಟಿ. ಮರಿಯಪ್ಪನವರು ಬೆಂಗಳೂರಿನಲ್ಲಿ ನಿನ್ನೆ ಹೇಳಿಕೆ ಇತ್ತು, ಸಧ್ಯದಲ್ಲಿಯೇ ಮೈಸೂರಿನಲ್ಲೂ ಹನ್ನೆರಡು ಔನ್ಸಿಗೆ ಪಡಿತರವನ್ನು ಹೆಚ್ಚಿಸುವುದಾಗಿ ತಿಳಿಸಿರುವರು.

ರಾಜೀನಾಮೆ

ಕಾಂಗ್ರೆಸಿಗೆ ಅಹಮದ ನಗರದ 48 ಮಂದಿ ರಾಜೀನಾಮೆ ಕೊಟ್ಟಿದ್ದಾರೆ.

ಉತ್ಪ್ರೇಕ್ಷೆ

ರಾಜಕುಮಾರಿ ಅಮೃತಕೌರರು ಲಂಡನ್ನಲ್ಲಿ ಹೇಳಿಕೆ ಇತ್ತು ಭಾರತದಲ್ಲಿರುವ ಆಹಾರ ಅಭಾವದ ಬಗೆಗೆ ಉತ್ಪ್ರೇಕ್ಷೆ ವಂದಿಗಳು ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದೆಯೆಂದು ತಿಳಿಸಿದರು.

ಗೋಧಿ ಕೊಡಿ

ಕೆನಡ ಕಾರ್ಮನ್ಸ್ ಸಭೆಯು ವಿದೇಶ ಸಂವಿತ್ತಿ ಸಾಧ್ಯವಾದಷ್ಟು ಆಹಾರವನ್ನು ಭಾರತಕ್ಕೆ ಕಳಿಸಬೇಕೆಂದು ಸರಕಾರಕ್ಕೆ ಒತ್ತಾಯ ಹಾಕಿದೆ

ಇಂಗಾಕಿನಿಂದ ಭಾರತಕ್ಕೆ ಇಪ್ಪತ್ತು ಸಹಸ್ರ ಟನ್ ಗೋಧಿ ಬರಲಿದೆ.

ಅಖಿಲ ಭಾರತ ಪ್ರಜಾತಂತ್ರ ಪರಿಷತ್ತಿನ ಅಧ್ಯಕ್ಷರಾದ ಪಾಟ್ನಾ ಮಹಾರಾಜರು ಆಚಾರ್ಯ ಕೃಪಾಲಿನಿಯವರನ್ನು ಬೆಂಬಲಿಸಲಿರುವರು.

ಮೊಸ್ಸೆ ಪಾಕಿಸ್ತಾನದಿಂದ ಬೊಂಬಾಯಿಗೆ ಎರಡು ಸಾವಿರ ಟನ್ ಅಕ್ಕಿ ಬಂದಿತು.

ಪತ್ರವ್ಯವಹಾರ

ಗೋಹತ್ಯಾ ಕಾನೂನು ನಮ್ಮ ಮೈಸೂರು ಸಂಸ್ಥಾನದಲ್ಲಿ ಹಾಲಿ ಜಾರಿಯಾಗಿದ್ದರೂ ಈಚೆಗೆ ಗೋಮಾಂಸ ಮಾರಾಟದ ಅಂಗಡಿಗಳು ರಾಜಧಾನಿಯಲ್ಲಿ ಟ್ಟು ಮಾರಾಟ ಮಾಡಲು ಲೈಸನ್ಸು ಪಡೆಯುವದಕ್ಕಾಗಿ ಸುಮಾರು ಐದು ಸಾವಿರ ರೂಪಾಯಿಗಳಷ್ಟು ಖರ್ಚು ಮಾಡಿ ಲೈಸೆನ್ಸು ಪಡೆದು ಅಂಗಡಿಗಳನ್ನಿಟ್ಟರವರೆಂಬ ಸಮಾಚಾರ ತಿಳಿದುಬಂದಿದೆ. ಈ ವಿಷಯವನ್ನು ಮಹಾಜನರು ವಿಚಾರಮಾಡಿ ಇದರ ಸತ್ಯಾಸತ್ಯಾಂಶಗಳನ್ನು ತಿಳಿದುಕೊಳ್ಳಬೇಕಾಗಿ ಪ್ರಾರ್ಥನೆ.

ಇದರಿಂದ ಇಲ್ಲಿಯೇ ಗೋಹತ್ಯೆ ಮಾಡಿದರೂ ಕಾನೂನು ಪ್ರಕಾರ ಅವರ ಮೇಲೆ ಕ್ರಮ ಜರುಗಿಸುವ ಅವಕಾಶವೂ ಸಹ ಪೋಲೀಸರಿಗೆ ತಪ್ಪಿ ಹೋಯಿತು — ಎಂದು ಶ್ರೀ ರಾಮನಾಥಯ್ಯ ಎಂಬವರು ಬರೆದಿರುವರು.

ತೊಂದರೆ ಇಲ್ಲ

ಕಾಶ್ಮೀರದಲ್ಲಿ ಆಹಾರ ಅಭಾವ ಇಲ್ಲ

ಬದಲಾವಣೆಯಿಲ್ಲ

ಭಾರತದ ಹಿತ, ಬೆಳೆಯಲ್ಲಿ ಈಗಾವ ವ್ಯತ್ಯಾಸವೂ ಆಗುವದಿಲ್ಲವೆಂದು ದಿಲ್ಲಿ ವಾರ್ತೆ

ಆಚಾರ್ಯ ಕೃಪಾಲಿನಿ ನೇತೃತ್ವದಲ್ಲಿ ಸಂಘಟಿತವಾದ ಪಕ್ಷದ ಸದಸ್ಯತ್ವದ ಶುಲ್ಕ ನಾಲ್ಕಾಣೆ ಇರಬೇಕೆಂದು ಪಾಟ್ನಾದಲ್ಲಿ ಸಮಾವೇಶವಾಗಿದ್ದ ಪರಿಷತ್ತು ನಿರ್ಣಯಿಸಿದೆ. ಜಾತಿವರ್ಗಗಳ ಸೋಂಕಿಲ್ಲದ ಸಮಾಜ ಸೃಷ್ಟಿಯೇ ಆ ಪಕ್ಷದ ಧೋರಣೆ

ಅಜ್ಜಂಪುರ ತಾಲ್ಲೂಕಿನಲ್ಲಿ ಕಾಲರಾ ಪ್ರಸರಿಸಿತ್ತಿದೆ.

ವಿವಾಹಮಹೋತ್ಸವ

ರಾವ್‌ಸಾಹೆಬ್ ಶ್ರೀಮಾನ್ ಬಿ. ಮುನಿಶೆಂಕಟಪ್ಪನವರು ತಮ್ಮ ಕುಮಾರ ಚಿ|| ಬಿ. ಎಂ. ಲಕ್ಷ್ಮಣಮೂರ್ತಿ ಬಿ ಎ ರವರಿಗೆ, ಶ್ರೀ ಜಿ. ಆರ್. ಬೈಯಪ್ಪನವರ ಕುಮಾರ್ತಿ ಚಿ || ಸೌ || ಲಲಿತಾರವಂನ್ನು ತಂದುಕೊಂಡು ವಿವಾಹಮಹೋತ್ಸವವನ್ನು ವೈಭವದಿಂದ, ಬೆಂಗಳೂರು ಬಸವನಗುಡಿಯಲ್ಲಿರುವ ತಮ್ಮ ಗ್ರೇನೈಟ್ ಫ್ಯಾಕ್ಟರಿಯಲ್ಲಿ ನಿನ್ನೇ ದಿವಸ ನೆರವೇರಿಸಿದರು ಈ ನೂತನ ದಂಪತಿಗಳಿಗೆ ಭಗವಂತನು ಸಕಲ ಸನ್ಮಂಗಳಗಳನ್ನೂ ದಯಪಾಲಿಸಲೆಂದು ಹಾರೈಸುತ್ತೇವೆ.

ಡಾ || ಮುತ್ತುಕೃಷ್ಣರೊಡನೆ ಮಾತುಕತೆ

(ನಮ್ಮ ಪ್ರತಿನಿಧಿಯಿಂದ)

'ಡಿವೈಕ ಪವರ್' ನಿಂದ ರೋಗವನ್ನು ನಾನು ಗುಣಪಡಿಸಬಲ್ಲೆ : ನಾನು ತಿಳಿಸುವವರೆಗೆ ರೋಗಿಗಳು ಚಿಕಿತ್ಸೆಗೊಳಗಾಗಬೇಕು : ಮಧ್ಯದಲ್ಲೇ ಚಿಕಿತ್ಸೆಯನ್ನು ಬಿಟ್ಟಲ್ಲಿ ಬಹಳ ತೊಂದರೆಯಾಗುವುದು — ಎಂದು ಡಾ || ಮುತ್ತುಕೃಷ್ಣ ನಮ್ಮ ಪ್ರತಿನಿಧಿಗೆ ಮೊನ್ನೆ ತಿಳಿಸಿದರು. ಸುಪ್ರಸನದಿಂದ ಸುಸಜ್ಜಿತವಾದ ಕೋಣೆಯಲ್ಲಿ ಡಾಕ್ಟರರು ನಮ್ಮ ಪ್ರತಿನಿಧಿಯನ್ನು ಸೌಜನ್ಯದಿಂದ ಸ್ವಾಗತಿಸಿದರು. ಕೋಣೆಯಲ್ಲಿ ಶ್ರೀ ರಾಮಕೃಷ್ಣರ ಪಟಗಳು ಸಹಾ ಇದ್ದವು ಅದೇ ಹೊತ್ತಿನಲ್ಲಿ ಚಿಕ್ಕನಾಯ್ಕನಹಳ್ಳಿಯಿಂದ ರೋಗಿಯೋರ್ವನನ್ನು ಕರತರುವ ಬಗ್ಗೆ ತಿಳಿಸಲು ಓರ್ವರು ಬಂದಿದ್ದರು ; ಪ್ರೀತಿಯಿಂದ ಡಾಕ್ಟರರು ಉತ್ತರಿಸಿದರು. ದಾವಣಗೆರೆ ಮಹಿಳೆಯೋರ್ವರಿಗೆ ದೇವರ ದಯೆಯಿಂದ ಗುಣವಾಗುತ್ತಿರುವ ಅಂಶವನ್ನು ವೈದ್ಯರು ನಮ್ಮ ಪ್ರತಿನಿಧಿಗೆ ತಿಳಿಸಿದರು. ಜನಸೇವೆಯೇ ತಮ್ಮ ಗುರಿಯೆಂದು ಅವರು ನಮ್ಮ ಪ್ರತಿನಿಧಿಗೆ ಹೇಳಿದರು.

ವಿಷಜಂತು ಕಡಿದವರಿಗೆ ಚಿಕಿತ್ಸೆ

ನಾಗಸರ್ಪ, ಮಂಡರಗಪ್ಪೆ, ಚೇಳು, ಇನ್ನೂ ಅನೇಕ ವಿಷಜಂತುಗಳು ಕಡಿದವರಿಗೆ ಮಂತ್ರಶಕ್ತಿಯಿಂದ ನಿಲ್ಲಿಸಲಾಗುತ್ತೆ. ಉಚಿತವಾಗಿ.

ಬಿ. ನಂಜಿಂಹಯ್ಯಂಗಾರ್, 1030 ಚಾಮುಂಡಿಪುರಂ, ಮೈಸೂರು.

ರಣಜಿತ್ ಜನಸಂದಣಿ 2 ನೇ ವಾರ

ರಾಜರಾಣಿ Raj Rani

ಕೆಪರ್ಮಾ, ಮಿಾನಾ, ಸೋಹಕ್, ಉಷಾ ಕಿರಣ್ ಶಶಿಕಲಾ. ಕಕ್ಕೂ ನಟಿಸಿರುವ

ಮನಮೋಹಕ ಸಂಗೀತ ನೃತ್ಯಗಳಿಂದ ಕೂಡಿದ ಸಾಮಾಜಿಕ ಒಂದಿ ಚಿತ್ರ

ಪ್ರತಿ ದಿನ 3 ಆಟಗಳು

Announcement

Theatre building old materials and furniture are being sold very cheap.

Apply to—
NEW OPERA TALKIES
MYSORE

ಸಿನೆಮಾ ಕಟ್ಟಡದ ಹಳೇ ಸಾಮಾನುಗಳೂ ಫರ್ನೀಚರುಗಳೂ ಸುಲಭ ಬೆಲೆಗೆ ಮಾರಾಟಕ್ಕಿವೆ.

ವಿವರಗಳಿಗೆ—
ನ್ಯೂ ಆಪೇರಾ ಟಾಕೀಸ್'
ಮೈಸೂರು

Protect the Cow

Edited, Printed and Published by M. S. Krishna Rao, at the Satyavadi Press Chamrajpuram Mysore

ಉಡ್‌ಲಾಂಡ್ ಜನಭರಿತ 2 ನೇ ವಾರ

ಬಿಗ್

ಉನ್ಮಾರ್ಖಯಾಂಧಂ ಅತ್ಯದ್ಭುತ ಸಾಹಸ ಹಿಂದಿ ಚಿತ್ರ

ಉಸ್ತಾದ್ ಪೆಡ್ರೊ

ಪಾತ್ರ— ಬೇಗಂ ಪಾರ, ಶಮ್ಮಿ, ಸಪ್ರು, ಷೇಕ್ ಮುಕ್ತಾರ್

USTAD PEDRO

ಪ್ರತಿ ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ — 15-6-51 ರಂದ — 10-30 ಕ್ಕೆ

Darkest Africa ಡಾರ್ಕೆಸ್ಟ್ ಆಫ್ರಿಕ

ರೋಮಾಂಚಕ ಇಂಗ್ಲೀಷ್ ಚಿತ್ರ

ಐ. ಟಿ. ಎಲ್. ಗ್ರೈಪ್‌ಸಿರಪ್

ನಿಮ್ಮ ಮುದ್ದು ಕಂದನ
ಅಜೀರ್ಣ ವ್ಯಾಧಿಗಳನ್ನು ತಡೆದು
ಆರೋಗ್ಯ ಕಾಪಾಡುವ ಅಮೃತಪಾನ

— ತಯಾರಕರು —
ದಿ ಮೈಸೂರು ಇಂಡಸ್ಟ್ರಿಯಲ್
ಅಂಡ್ ಟೆಸ್ಟಿಂಗ್ ಲ್ಯಾಬೊರೇಟರಿ
ಲಿಮಿಟೆಡ್
ಮಲ್ಲೇಶ್ವರಂ ಪೋಸ್ಟ್, ಬೆಂಗಳೂರು 3

ಶ್ರೇಷ್ಠತೆಯ ಹೆಗ್ಗುರುತು

ಗ್ರೈಪ್‌ಸಿರಪ್

ಮೈಸೂರು ಉಕ್ಕನು ಬಳಸಿ

ಮೃದುವಾದ ಉಕ್ಕಿನ ಪಟ್ಟಿಗಳು,

ಮೈಸೂರು

- ದುಂಡು,
- ಚೌಕೋನ,
- ಸರಳುಗಳು,
- ಮೂಲೆಗಂಬಗಳು
- ಬೇಲುಕಟ್ಟುಗಳು

ಕಬ್ಬಿಣ ಮತ್ತು ಉಕ್ಕಿನ ಕಾಖಾನೆ,
ಭದ್ರಾವತಿ.